ಪ್ರಮಾಣೀಕರಿಸಲಾದ ದಿನಾಂಕಃ **31.07.2025.**

<u>ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ</u>

ನಾನು ವಾದಿಯ ಮನೆಗೆ ಹೋಗಿರುತ್ತೇನೆ. ಬಾಳಾಜಿ ಮುಖ್ಯರಸ್ತೆಯಿಂದ ವಾದಿ ಮನೆ 1 ಕಿ. ಮೀ ದೂರ. ವಾದಿಯು ಅವರ ಗದ್ದೆಗೆ ಹೋಗಬೇಕಾದರೆ 1 ಕಿ. ಮೀ ಬಂದು ಬಾಳಾಜಿ ಮುಖ್ಯ ರಸ್ತೆಗೆ ಸೇರಿ ಹೋಗಬೇಕು ಎಂದರೆ ಸರಿ. ಈ ಮುಖ್ಯ ರಸ್ತೆಯಿಂದ ನನ್ನ ಮನೆಗೆ ಕಡೆಗೆ ಬಂದು ಅವರು ಗದ್ದೆಗೆ ಹೋಗಬೇಕು ಎಂದರೆ ಸರಿ. ನನ್ನ ಮನೆಯ ಬಳಿ ಗದ್ದಗೆ ಹೋಗುವ ರಸ್ತೆ ಇದ್ದು, ಆ ರಸ್ತೆ ಮೊದಲು ವಾದಿಗೆ ಸಿಗುತ್ತದೆ ಎಂದರೆ ಸರಿ, ಅದು ನನ್ನ ಸ್ವಂತ ಜಾಗ. ನನ್ನ ಈ ಸ್ವಂತ ರಸ್ತೆ ನಾಲಕಟ್ಟೆ ರಸ್ತೆ 200 ರಿಂದ 300 ಅಡಿ ಇರುತ್ತದೆ. ನಾಲಕಟ್ಟೆ ರಸ್ತೆಯು ಬಾಳಾಜಿ ಕಟ್ಟೆ ರಸ್ತೆಗೆ ಹೋಗಿ ಕೊನೆಗೊಳ್ಳುತ್ತದೆ. ಸಾಕ್ಷಿಗೆ ಫೋಟೋ ತೋರಿಸಿ ಈ ಸ್ಥಳದಲ್ಲಿ ಕೊನೆಗೊಳ್ಳುತ್ತದೆ ಎಂದು ಒಪ್ಪಿದ್ದು ಅದನ್ನು ನಿ. ಪಿ. 50 ಎಂದು ಗುರುತಿಸಲಾಯಿತು. ನಿ. ಪಿ. 50 ಫೋಟೋದಲ್ಲಿ ಇರುವ ಕಟ್ಟೆಗೆ ಹೊಂದಿಕೊಂಡಂತೆ ವಾದಿಗೆ ಜಮೀನು ಇರುವುದಿಲ್ಲ ಹೊಳೆಯ ಪಕ್ಕದಲ್ಲಿರುತ್ತದೆ. ನಾಲಕಟ್ಟೆಯಿಂದ ಹೊಳೆ ದಾಟಿ 300 ಮೀಟರ್ ಪಕ್ಕಕ್ಕೆ ವಾದಿಯ ಜಮೀನು ಇರುತ್ತದೆ.

ನನ್ನ ಸ್ವಂತ ಜಮೀನಲ್ಲಿರುವ ರಸ್ತೆಯಿಂದ ನಾಲಕಟ್ಟೆಯು ಕೊನೆಗೊಳ್ಳುವ 300 ರಿಂದ 400 ಮೀ. ದೂರ. ಪ್ರತಿವಾದಿ ಪತ್ರದಲ್ಲಿ ಮತ್ತು counter claim ನಲ್ಲಿರುವ ಅಂಶಗಳು ಸರಿ ಇರುತ್ತದೆ. ಸಾಕ್ಷಿಗೆ counter claim ಪ್ಯಾರಾ 4 ರಲ್ಲಿ ತಿಳಿಸಿರುವಂತೆ ಓದಿ ಹೇಳಿದ್ದು 100 ಅಡಿ ಎಂದು ಇದ್ದು ಅದು ತಪ್ಪಾಗಿದ್ದು ಅದು ಕೇವಲ 10 ಅಡಿ ಆಗಿರುತ್ತದೆ. ನಾನು ಈ 10 ಅಡಿ ರಸ್ತೆಯಲ್ಲಿ ಗದ್ದೆಗೆ ಹೋಗುವುದಿಲ್ಲ ಮಧ್ಯದಲ್ಲಿ ನಮಗೆ ಸೇರುವ ತೋಟಕ್ಕೆ ಹೋಗುತ್ತೇವೆ. ನಾಲಕಟ್ಟೆ ರಸ್ತೆಯಿಂದ ಕೋಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ಎಂದರೆ ಎರಡೂ ಒಂದೇ ರಸ್ತೆ ಎನ್ನುತ್ತಾರೆ. ಈ ರಸ್ತೆಗಳು ಒಂದೇ ಅಲ್ಲ ಪ್ರತ್ಯೇಕ ರಸ್ತೆಗಳು ಎಂದರೆ ಸರಿಯಲ್ಲ. ಸದರಿ ಎರಡು ರಸ್ತೆಗಳು ಬೇರೆ ಬೇರೆ ಯೋಜನೆಯಡಿಯಲ್ಲಿ ಅಭಿವೃದ್ದಿಗೊಂಡಿದೆ ಎಂದರೆ ಸರಿ. ನಾಲಕಟ್ಟೆ ರಸ್ತೆ ಮತ್ತು

ಕೊಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ಪ್ರತ್ಯೇಕ ಸಮಯಗಳಲ್ಲಿ ಅಭಿವೃದ್ದಿ ಪಡಿಸಿದರು ಎಂದರೆ ಸರಿ, ಮೊದಲಿಗೆ ನಾಲಕಟ್ಟೆರಸ್ತೆ ಅಭಿವೃದ್ದಿಪಡಿಸಿ ಅದನ್ನು ಇನ್ನೊಂದು ವರ್ಷಕ್ಕೆ ನವೀಕರಣ ಮಾಡುವಾಗ ಕೊಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ಕಲ್ಪಿಸಲಾಯಿತು. ಆ ಎರಡು ರಸ್ತೆ ಬೇರೆ ಬೇರೆ ಆಗಿದ್ದು, ಒಂದೇ ಬಾರಿ ಅಭಿವೃದ್ದಿಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2007-2008 ರಲ್ಲಿ ಎಷ್ಟು ವೆಚ್ಚಕ್ಕೆ ಕೊಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ಅಭಿವೃದ್ದಿಪಡಿಸಿದರು ಗೊತ್ತಿಲ್ಲ. ನಾಲಕಟ್ಟೆರಸ್ತೆಯ ಮತ್ತು ಕೊಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ಉದ್ದ ಎಷ್ಟು ಎಂದು ಕೇಳಿದ್ದು ಇವೆರಡು ಒಂದೇ ರಸ್ತೆ ಎಂದು ಹೇಳಿರುತ್ತಾರೆ. ನಾಲಕಟ್ಟೆರಸ್ತೆ ರೂ. 30 ಸಾವಿರ ಹಣ ಮತ್ತು ಕೊಣಿಯಂಡ ಕುಟುಂಬದ ಗದ್ದೆಗೆ ಹೋಗುವ ರಸ್ತೆ ರೂ. 20 ಸಾವಿರ ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿ. ಬೇರೆ ರಸ್ತೆಗಳಾದ ಕಾರಣ ಎರಡು ಬಾರಿ ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯವರಿಗೆ ಗದ್ದೆ ತೋಟಕ್ಕೆ ಹೋಗಲು ಬೇರೆ ದಾರಿ ಇದೆ ಎಂದು ಹೇಳಿದ್ದು, ಅದನ್ನು ನ್ಯಾಯಾಲಯದ ನಿಯೋಗಿಯನ್ನು ನೇಮಿಸಿ ಗುರುತಿಸಲು ನನಗೆ ಅಭ್ಯಂತರವಿಲ್ಲ. ನಾಲಕಟ್ಟೆಯ ರಸ್ತೆಯ ಪಕ್ಕದಲ್ಲಿ Service ರಸ್ತೆ ಇದ್ದು ಅದರ ಫೋಟೋ ಕೊಟ್ಟಿಲ್ಲ, ಆದರೆ Minor irrigation department ನಿಂದ ಮಾಡಿದ project ದಾಖಲಾತಿ ನಿ. ಪಿ. 26 ಅನ್ನು ಹಾಜರುಪಡಿಸಿರುತ್ತೇನೆ. ನಿ. ಪಿ. 26 ದಾಖಲೆಯಲ್ಲಿ 2 ನೇ ಪ್ಯಾರಾವನ್ನು ಓದಿ ಹೇಳಿದ್ದು ಸರಿ ಎಂದು ಹೇಳಿರುತ್ತಾರೆ. ಮಾಯಮುಡಿ ಮುಖ್ಯ ರಸ್ತೆಯಿಂದ Service ರಸ್ತೆ ಆರಂಭವಾಗಿ ನಾಲಕಟ್ಟೆವರೆಗೂ ಇರುತ್ತದೆ ಎಂದರೆ ಸರಿ, ಮುಂದುವರೆದು ಕೊಣಿಯಂಡ ಕುಟುಂಬಸ್ಥರ ಗದ್ದೆ ಆ ನಾಲಕಟ್ಟೆಯಿಂದಲೇ ಶುರುವಾಗುತ್ತದೆ. ನಾಲಕಟ್ಟೆ ರಸ್ತೆಯು ಕೊಣಿಯಂಡ ಕುಟುಂಬಸ್ಥರ ಗದ್ದೆಗೆ ಮತ್ತು ನಮ್ಮ ಗದ್ದೆಗೆ ಸಂಪರ್ಕ ಕಲ್ಪಿಸುವುದಿಲ್ಲ ಎಂದರೆ ಅವರ ಕುಟುಂಬಕ್ಕೆ ಸಂಪರ್ಕವಿದೆ ನಾವು ನಮ್ಮ ಸ್ವಂತ ಜಮೀನಿನಲ್ಲಿ ಓಡಾಡಿಕೊಳ್ಳುತ್ತಿದ್ದೇವೆ.

ವಾದಿ ಮತ್ತು ಪ್ರತಿವಾದಿಗಳ ಗದ್ದೆಯ ಅಕ್ಕಪಕ್ಕ ಕೊಣಿಯಂಡ ಜಿಮ್ಮಯ್ಯ ಪೂವಯ್ಯ, ಕೊಣಿಯಂಡ ಮಣಿ ಪೂವಯ್ಯ, ಕೊಣಿಯಂಡ ಉತ್ತಪ್ಪ ಕೊಣಿಯಂಡ ಸುರೇಶ ಮತ್ತು ಕೊಣಿಯಂಡ ಚಂಗಪ್ಪರವರ ಗದ್ದೆಗಳಿವೆ. ಸೇವಾ ರಸ್ತೆ ನಮ್ಮ ಗದ್ದೆ ಅಥವಾ ವಾದಿಯ ಗದ್ದೆಗೆ ರಸ್ತೆ ಸಂಪರ್ಕ ಕಲ್ಪಿಸುವುದಿಲ್ಲ ಎಂದರೆ ಸರಿಯಲ್ಲ. ಈಗ ಹೇಳಿದ ಕೊಣಿಯಂಡ ಸದಸ್ಯರು ಈ ಸೇವಾ ರಸ್ತೆಯನ್ನು ಉಪಯೋಗಿಸುತ್ತಾರೆ. ವಾದಿಯರು ಮತ್ತು ಕೊಣಿಯಂಡ ಸದಸ್ಯರು ಈ ಸೇವಾ ರಸ್ತೆಯನ್ನು ಉಪಯೋಗಿಸುತ್ತಿರಲಿಲ್ಲ, ನಮ್ಮ ಸ್ವಂತ ಜಮೀನಿನಲ್ಲಿರುವ ರಸ್ತೆಯನ್ನು ಉಪಯೋಗಿಸುತ್ತಿದ್ದರು ನಾವು ಅದನ್ನು ಅಡ್ಡಿಪಡಿಸಿ ಈಗ ವ್ಯವಸಾಯ ಮಾಡದೇ ಬೀಳು ಬಿಟ್ಟದ್ದಾರೆ ಎಂದರೆ ಸರಿಯಲ್ಲ, ಗದ್ದೆಯನ್ನು ತೋಟಕ್ಕೆ ಮಾಡಿದ್ದರು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.